# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1796
ಸದಸ್ಯರ ಹೆಸರು : ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 19-03-2021.
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ ಮತ್ತು ನೌಕರರುಗಳಿಗೆ ಅನ್ಯ ಇಲಾಖೆಯಿಂದ ಅನ್ಯ ಕಾರ್ಯನಿರ್ವಹಿಸಲು ನೇರವಾಗಿ ಆದೇಶ ಪಡೆಯಬಹುದೇ; (ವಿವರ ನೀಡುವುದು) | ಇಲ್ಲ. |
| (ಆ) | ಇತ್ತೀಚೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ ಮತ್ತು ನೌಕರರುಗಳಿಗೆ ಕಂದಾಯ ಇಲಾಖೆಯಿಂದ ನೇರವಾಗಿ ಆದೇಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು; (ವಿವರ ನೀಡುವುದು) | ಬಂದಿದೆ.<br><br>ಚುನಾವಣಾ ಪ್ರಕ್ರಿಯೆ, ವಿಪತ್ತು ನಿರ್ವಹಣೆ ಮತ್ತು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ ಮತ್ತು ನೌಕರರುಗಳಿಗೆ ನೇರವಾಗಿ ಆದೇಶ ಮಾಡಲಾಗುತ್ತಿದೆ.<br><br>ಮೇಲೆ ತಿಳಿಸಿರುವುದನ್ನು ಹೊರತುಪಡಿಸಿ, ಗ್ರಾಮ ಪಂಚಾಯತಿಗಳಲ್ಲಿ ಕಾರ್ಯಭಾರದ ಒತ್ತಡವನ್ನು ಪರಿಗಣಿಸಿ ಗ್ರಾಮ ಪಂಚಾಯತಿಗಳಿಗೆ ಹೊಸ ಕಾರ್ಯಗಳನ್ನು ವಹಿಸುವ ಮುನ್ನ ಅನುಷ್ಠಾನ ಇಲಾಖೆಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರೊಂದಿಗೆ ಕಡ್ಡಾಯವಾಗಿ ಪೂರ್ವಿಭಾವಿ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 67 ಉಖಾಯೋ 2009 ದಿನಾಂಕ:16-06-2014 ರಲ್ಲಿ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ರವರು ಕೋರಿರುತ್ತಾರೆ. |
| (ಇ) | ಅನ್ಯ ಇಲಾಖೆಯಿಂದ ಆಗುತ್ತಿರುವ ಆದೇಶಗಳನ್ನು ಪಾಲಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕೆಲಸ ನಿರ್ವಹಿಸುವ ಕ್ಷೇತ್ರ ಮಟ್ಟದ ನೌಕರರು ತಮ್ಮ ಮೂಲ ಇಲಾಖೆಯಲ್ಲಿನ ಕೆಲಸದಲ್ಲಿ ಪ್ರಗತಿ ಸಾಧಿಸಲು ತೊಂದರೆಗೀಡಾಗಿರುವುದು ಕುರಿತಾದ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು? (ವಿವರ ನೀಡುವುದು) | |

ಸಂ. ಗ್ರಾಅಪ 149 ಗ್ರಾಪಂಅ 2021

**(ಕೆ.ಎಸ್. ಈಶ್ವರಪ್ಪ)**
ಗ್ರಾಮೀಣಾಭಿವೃದ್ಧಿ ಮತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಸಂಖ್ಯೆ:ಕವಿಪ/ಪ್ರಶಾ/**143**ನೇಮುಅ/ಉಕೋಬ/2021

ವಿಧಾನ ಪರಿಷತ್ತಿನ ಸಚಿವಾಲಯ,
ವಿಧಾನಸೌಧ,ಅಂಚೆ ಪೆಟ್ಟಿಗೆ ಸಂಖ್ಯೆ: 5079,
ಬೆಂಗಳೂರು-560 001, ದಿನಾಂಕ: 02.07.2021

ಕಾರ್ಯದರ್ಶಿಯವರಿಂದ,
ಕರ್ನಾಟಕ ವಿಧಾನ ಪರಿಷತ್ತು.

ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ
**ವಸತಿ ಇಲಾಖೆ**
ವಿಕಾಸ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ವಿಧಾನ ಪರಿಷತ್ತಿನ 143ನೇ ಮುಂದುವರೆದ ಅಧಿವೇಶನಕ್ಕೆ ಸಂಬಂಧಿಸಿದಂತೆ ಉತ್ತರಗಳನ್ನು ಒದಗಿಸುವ ಬಗ್ಗೆ.

****

ಕರ್ನಾಟಕ ವಿಧಾನ ಪರಿಷತ್ತಿನ 143ನೇ ಮುಂದುವರೆದ ಅಧಿವೇಶನದಲ್ಲಿ (ದಿನಾಂಕ: 04-03-2021ರಿಂದ 24-03-2021ರ ವರೆಗೆ)ಮಾನ್ಯ ಸದಸ್ಯರು ಸದನದಲ್ಲಿ ಮಂಡಿಸಿದಂತಹ **ವಸತಿ ಇಲಾಖೆ** ಗೆ ಸಂಬಂಧಿಸಿದಂತೆ ಈ ಕೆಳಕಂಡ ಚುಕ್ಕೆ ರಹಿತ ಪ್ರಶ್ನೆಗೆ ಉತ್ತರವನ್ನು ಮಾನ್ಯ ಸದಸ್ಯರು ನಿರೀಕ್ಷಿಸಿರುತ್ತಾರೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 37(ಎ) ರಲ್ಲಿ ಪ್ರಶ್ನೆಗಳ ಪಟ್ಟಿಯಲ್ಲಿ ಸೇರಿಸಲಾದ ಚುಕ್ಕೆ ~~ಗುರುತಿನ ಹಾಗೂ ಚುಕ್ಕೆ~~ ರಹಿತ ಪ್ರಶ್ನೆಗಳಿಗೆ ಕಡ್ಡಾಯವಾಗಿ ಅನ್ಯಥಾ ಅನುಮತಿಸದ ಹೊರತು ಲಘು ಪ್ರಕಟಣೆಯಲ್ಲಿ ಮೂಲತ: ಘೋಷಿಸಲಾದ ದಿನಾಂಕಕ್ಕೆ ಅಧಿವೇಶನವು ಮುಕ್ತಾಯಗೊಂಡ 15 ದಿನಗಳೊಳಗಾಗಿ ಲಿಖಿತ ಉತ್ತರಗಳನ್ನು ಪ್ರಶ್ನೆ ಕೇಳಿದ ಸದಸ್ಯರುಗಳಿಗೆ ಒದಗಿಸುವ ಸಲುವಾಗಿ ವಿಧಾನ ಪರಿಷತ್ತಿನ ಸಚಿವಾಲಯಕ್ಕೆ ಒದಗಿಸುವುದು ಎಂಬುವುದಾಗಿರುತ್ತದೆ. ಅದರಂತೆ ಚುಕ್ಕೆ ಗುರುತಿನ ಹಾಗೂ ಚುಕ್ಕೆ ರಹಿತ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸುವುದು ಕಡ್ಡಾಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಸಹ ತಮ್ಮ ಪ್ರಶ್ನೆಗೆ ಉತ್ತರವನ್ನು ಒದಗಿಸಬೇಕೆಂದು ಕೋರುತ್ತಿರುವುದರಿಂದ, ತಮ್ಮ ಇಲಾಖೆಗೆ ಸಂಬಂಧಿಸಿದ ಈ ಕೆಳಕಂಡ ಚುಕ್ಕೆ ರಹಿತ ಪ್ರಶ್ನೆಗೆ ಈವರೆವಿಗೂ ಉತ್ತರಬಾರದಿರುವ ಹಿನ್ನೆಲೆಯಲ್ಲಿ ಉತ್ತರವನ್ನು (10 ಪ್ರತಿ) ಕಡ್ಡಾಯವಾಗಿ ತ್ವರಿತಗತಿಯಲ್ಲಿ ವಿಧಾನ ಪರಿಷತ್ತಿನ ಸಚಿವಾಲಯಕ್ಕೆ ಕಳುಹಿಸಿಕೊಡಬೇಕೆಂದು ಹಾಗೂ ಅದರ ಸಾಫ್ಟ್ ಪ್ರತಿಯನ್ನು e-mail ID questionsklc@karnataka.gov.in ಗೆ ಮೇಲ್ ಮಾಡುವಂತೆ ಕೋರಲು ನಿರ್ದೇಶಿತನಾಗಿರುತ್ತೇನೆ.

**ಚುಕ್ಕೆ ರಹಿತ ಪ್ರಶ್ನೆ ವಿವರ**

| ಕ್ರ ಸಂ | ಸದಸ್ಯರ ಹೆಸರು ಶ್ರೀಮತಿ:ಶ್ರೀಯುತರುಗಳಾದ: | ~~ಚುಕ್ಕೆ ಗುರುತಿನ~~ ಪ್ರಶ್ನೆ ಸಂಖ್ಯೆ | ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | ಉತ್ತರಿಸಬೇಕಾಗಿದ್ದ ದಿನಾಂಕ |
|---|---|---|---|---|
| 01 | ಎಂ.ಎ. ಗೋಪಾಲಸ್ವಾಮಿ | -- | ~~908~~ 1430 | ~~10.03.2021~~ 17-3-2021 |

ತಮ್ಮ ವಿಶ್ವಾಸಿ,

**(ಎಸ್. ನಾಗರಾಜು)**
ಅಧೀನ ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು.